# ಉಪ ತಹಶೀಲ್ದಾರರು ನಾಡಕಾರ್ಯಾಲಯ ತೆಕ್ಕಲಕೋಟೆ ಇವರ ನ್ಯಾಯಾಲಯದಲ್ಲಿ

ವಾದಿಗಳು
ವಾಸಪ್ಪನವರ ವೀರೇಶ ತಂದೆ
ಕನಕಪ್ಪ
64-ಹಳೇಕೋಟೆ ಗ್ರಾಮ

ಪ್ರತಿವಾದಿಗಳು
ಕುರುಬರ ಶೇಖಣ್ಣ
ತಂದೆ: ನಾಗಪ್ಪ
64-ಹಳೇಕೋಟೆ.

| ಕ್ರ. ಸಂ. | ತಾಲೂಕು | ಗ್ರಾಮ | ಹೋಬಳಿ | ಸರ್ವೆ ನಂ. | ವಿಸ್ತೀರ್ಣ | ತಹರೆ |
|---|---|---|---|---|---|---|
| 1. | ಸಿರುಗುಪ್ಪ | ತೆಕ್ಕಲಕೋಟೆ | 64-ಹಳೇಕೋಟೆ | 513B/1<br>513/b3 | 1-00<br>3-13 | -- |

ಪೀಠಿಕೆ:-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, 64-ಹಳೇಕೋಟೆ ಗ್ರಾಮದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ಕುರುಬರ ಅಯ್ಯಮ್ಮ ಗಂಡ: ನಾಗಪ್ಪ ಇವರು ದಿನಾಂಕ: 28-05-2015ರಂದು ಪೋತಿಯಾಗಿರುವ ಕಾರಣ ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕುರುಬರ ಶೇಕಣ್ಣ ತಂದೆ: ದಿ:ನಾಗಪ್ಪ ಇವರು ದಿನಾಂಕ:20-08-2015ರಂದು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಭೂಮಿ ಕೇಂದ್ರ ತಾಲ್ಲೂಕು ಕಛೇರಿಯಲ್ಲಿ ದಿನಾಂಕ: 01-09-2015ರಂದು ನಮೂನೆ-21 ನೋಟಿಸನ್ನು ತಯಾರಿಸಿ ಹಕ್ಕು ಬದಲಾವಣೆಗೆ ಪ್ರಕ್ರಿಯೆ ಜರುಗಿಸಲು ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಿ ಕೊಡಲಾಗಿ ಗ್ರಾಮದಲ್ಲಿ ನಮೂನೆ-21 ನೋಟಿಸ್ಸು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯಲ್ಲಿ ಆಸಕ್ತಿಯುಳ್ಳವರಿಂದ ಆಕ್ಷೇಪಣೆ ಸ್ವೀಕೃತ ವಾಗಿರುವುದರಿಂದ ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ವಹಿಯಲ್ಲಿ ನಮೂದಿಸಿಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67 ರಂತೆ ವಿಚಾರಣೆ ದಿನಾಂಕವನ್ನು ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸ್ಸು ನೀಡಿ ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಗಿರುತ್ತದೆ.

ವಿಚಾರಣೆ ಸಮಯದಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಇಬ್ಬರು ಹಾಜರಿರುತ್ತಾರೆ. ವಾದಿಗಳು ವಿಚಾರಣೆ ಸಮಯದಲ್ಲಿ ಸ.ನಂ:513B3 ವಿ:4-33ಎಕರೆಯಲ್ಲಿ 1)ಕುರುಬರ ಅಯ್ಯಮ್ಮ ಗಂಡ: ನಾಗಪ್ಪ ವಿ:3-13ಸೆಂಟ್ಸ್ 2)ವೀರೇಶ ತಂದೆ: ದಿವಂಗತ ವಾಸಪ್ಪನವರ ಕನಕಪ್ಪ ವಿ:1-20ಸೆಂಟ್ಸ್ ಇದ್ದು ನಮ್ಮ ಜಮೀನನ್ನು ಅಳತೆ ಮಾಡಿಸಿ ಪೋಡಿ ಮಾಡಿಸಿಕೊಡಲು ಕೋರಿ ಕೇಸ್ ಸೀಟ್‌ಗೆ ಸಹಿ ಮಾಡದೇ ನ್ಯಾಯಾಲಯದಿಂದ ಹೊರ ನಡೆದಿರುತ್ತಾರೆ. ಪ್ರತಿವಾದಿಗಳು ನಮ್ಮ ತಾಯಿಯ ಹೆಸರಿನಲ್ಲಿ ಪಹಣಿ ಇದ್ದು, ಅವರು ಮರಣ ಹೊಂದಿರುವ ಕಾರಣ ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗಿ ಸರ್ವೆ ನಂ: 513/B3 ವಿಸ್ತೀರ್ಣ ಒಟ್ಟು ವಿಸ್ತೀರ್ಣ 4-33ಸೆಂಟ್ಸ್ ಇದ್ದು, ಪಹಣಿ ಕಲಂ 9ರಲ್ಲಿ ಕುರುಬರ ಅಯ್ಯಮ್ಮ ಗಂಡ: ನಾಗಪ್ಪ ಇವರ ಹೆಸರಿಗೆ 3-13ಎಕರೆ ಹಾಗೂ ವೀರೇಶ ತಂದೆ: ಲೇಟ್ ವಾಸಪ್ಪನವರ ಕನಕಪ್ಪ ಇವರ ಹೆಸರಿಗೆ 1-20ಎಕರೆ ಜಮೀನು ಇದ್ದು, ಇಬ್ಬರು ಪಟ್ಟಾದಾರರು ಕಬ್ಜ ಇರುತ್ತಾರೆ. ವಾದಿಗಳು ಪೋಡಿ ಅರ್ಜಿ ಸಲ್ಲಿಸಿ ಪಹಣಿ ವಿಂಗಡಣೆ ಮಾಡಿಕೊಳ್ಳುವ ಬದಲಾಗಿ ದುರುದ್ದೇಶದಿಂದ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಮೂಲ ಪಟ್ಟಾದಾರರಿಗೆ ಹಾಗೂ ವಾದಿಗಳಿಗೆ ಯಾವುದೇ ರೀತಿಯ ಸಂಬಂಧಗಳು ಇರುವುದಿಲ್ಲ. ಮೂಲ ಪಟ್ಟಾದಾರರ ಮರಣ ಪ್ರಮಾಣ ಪತ್ರ ವಂಶವೃಕ್ಷ, ಪ್ರಕಾರ ಮೂಲ ಪಟ್ಟಾದಾರರಾದ ವಾರಸುದಾರ ಹೆಸರಿಗೆ ಹಕ್ಕು ಬದಲಾವಣೆ ಮಾಡುವ ಅವಶ್ಯಕತೆ ಇರುವುದರಿಂದ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128 ಮತ್ತು 129ರ ಪ್ರಕಾರ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ

ಸಂ/ಕಂ/ಹ.ಬ/ವಿವಾದ/48/2015-16 ದಿನಾಂಕ:-12-04-2016

-:<u>ಆದೇಶ</u>:-

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆಧಾರದನ್ವಯ ಸಿರುಗುಪ್ಪ ತಾಲ್ಲೂಕು, ತೆಕ್ಕಲಕೋಟೆ ಹೋಬಳ, 64-ಹಳೇಕೋಟೆ ಗ್ರಾಮದ ಸರ್ವೆ ನಂ:513B ವಿ:1-00ಎಕರೆ, ಸರ್ವೆ ನಂ:513B3 ವಿ:3-13ಎಕರೆ ಜಮೀನುಗಳನ್ನು ಮೂಲ ಪಟ್ಟಾದಾರರ ಹೆಸರನ್ನು ಕಡಿಮೆ ಮಾಡಿ ಚೆಕ್ ಲಿಸ್ಟ್ ಪ್ರಕಾರ ಪೋತಿ ಫೀ ತುಂಬಿಕೊಂಡು ಪೋತಿ ವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಸದ್ರಿ ಆದೇಶವನ್ನು ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ಓದಿ ದಿನಾಂಕ: 12-04-16 ರಂದು ಬಹಿರಂಗವಾಗಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ತೆಕ್ಕಲಕೋಟೆ

ಪ್ರತಿಯನ್ನು:-
1)ವಾದಿ ಮತ್ತು ಪ್ರತಿವಾದಿಗಳಿಗೆ
2)ಗಣಕೀಕರಣ ಶಾಖೆಗೆ,